**1640 (2311) ಶ್ರೀ ಸಿದ್ದು ಸವದಿ (ಜಮಖಂಡಿ)** – ಮಾನ್ಯ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮಖಂಡಿ ತಾಲ್ಲೂಕಿನಲ್ಲಿ ಸುಮಾರು ಹತ್ತು ಗ್ರಾಮಗಳಲ್ಲಿ ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಬೇಡಿಕೆಗಳಿದ್ದು, ಈ ವರ್ಷ ಪ್ರಾರಂಭಿಸಲಾಗುವುದೇ,

ಆ) ರಾಜ್ಯದಲ್ಲಿ 2007–08 ರಲ್ಲಿ ಎಷ್ಟು ಪ್ರೌಢಶಾಲೆಗಳನ್ನು ಪ್ರಾರಂಭಿಸಲಾಗುವುದು ಮತ್ತು ಎಷ್ಟು ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲಾಗುವುದು,

ಇ) ಅನೇಕ ಪ್ರೌಢಶಾಲೆಗಳಿಗೆ ಕೊರಡಿಗಳ ಕೊರತೆ ಇದ್ದು ಇದನ್ನು ಯಾವ ಅನುದಾನದಲ್ಲಿ ಯಾವಾಗ ಕಟ್ಟಿಸಲಾಗುವುದು,

ಈ) ಪದವಿ ಪೂರ್ವ ಕಾಲೇಜುಗಳಲ್ಲಿ ವಿಜ್ಞಾನ ವಿಭಾಗ ಪ್ರಾರಂಭಿಸುವ ಬೇಡಿಕೆಗಳಿದ್ದು ಅದನ್ನು ಪ್ರಾರಂಭಿಸಲಾಗುವುದೇ, ಇಲ್ಲವಾದಲ್ಲಿ ಗ್ರಾಮೀಣ ಮಕ್ಕಳಿಗೆ ತೊಂದರೆ ಆಗುವುದಿಲ್ಲವೇ?

**ಶ್ರೀ ಬಸವರಾಜ್ ಎಸ್ ಹೊರಟ್ಟಿ ( ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)**

ಅ) ಮತ್ತು ಆ) ಆಯಾಯಾ ಸ್ಥಳಗಳ ಶೈಕ್ಷಣಿಕ ಅಗತ್ಯತೆ ಮತ್ತು ಆಯವ್ಯಯದಲ್ಲಿನ ಅವಕಾಶದ ಪ್ರಕಾರ ಹಂತ ಹಂತವಾಗಿ ಶಾಲೆಗಳನ್ನು ಮಂಜೂರು ಮಾಡಲಾಗುತ್ತಿದ್ದು, ಇದೊಂದು ಸತತವಾದ ಪ್ರಕ್ರಿಯೆಯಾಗಿದೆ

ಇ) ಆರ್ ಐ ಡಿ ಎಫ್ – 12 ರ ಅಡಿಯಲ್ಲಿ 4 ಪ್ರೌಢಶಾಲೆಗಳಿಗೆ ಕೊರಡಿ ನಿರ್ಮಾಣ ಮಾಡಲು ರೂ 80 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ ಉಳಿದಂತೆ, ಆರ್ ಐ ಡಿ ಎಫ್ –13 ರಡಿ ಅನುದಾನ ಒದಗಿಸಲು ಕಾರ್ಯಕ್ರಮ ರೂಪಿಸಲಾಗುತ್ತಿದ್ದು, ಅನುದಾನದ ಲಭ್ಯತೆಯ ಆಧಾರದ ಮೇಲೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಆಸ್ಪದವಾಗುತ್ತದೆ

ಈ) ಪದವಿ ಪೂರ್ವ ಕಾಲೇಜುಗಳಲ್ಲಿನ ವಿಜ್ಞಾನ ವಿಭಾಗಕ್ಕೆ ಬೇಡಿಕೆ, ವಿದ್ಯಾರ್ಥಿಗಳ ಸಂಖ್ಯೆ/ಲಭ್ಯತೆಯನ್ನು ಆಧರಿಸಿ ಹಾಗೂ ಶೈಕ್ಷಣಿಕ ಅಗತ್ಯತೆ, ಕಾಲೇಜಿನ ಮೂಲಭೂತ ಸೌಲಭ್ಯ ಮತ್ತು ವಾರ್ಷಿಕ ಅನುದಾನದಲ್ಲಿನ ಹಣಕಾಸಿನ ಲಭ್ಯತೆಯನ್ನು ಆಧರಿಸಿ

ಅಗತ್ಯವಾದ ಕಡೆ ವಿಜ್ಞಾನ ವಿಭಾಗವನ್ನು ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದ್ದು, ಇದೊಂದು ಸತತವಾದ ಪ್ರಕ್ರಿಯೆಯಾಗಿದೆ

**1641 (1836) ಶ್ರೀ ಸೋಮಣ್ಣ ವಿ (ಬಿನ್ನಿಪೇಟೆ)** – ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅದರಲ್ಲೂ ಬೆಂಗಳೂರಿನಲ್ಲಿ ಕನ್ನಡಕ್ಕೆಂದು ಅನುಮತಿ ಪಡೆದು ನಡೆಸುತ್ತಿರುವ ಆಂಗ್ಲ ಮಾಧ್ಯಮ ಶಾಲೆಗಳ ಸಂಖ್ಯೆ ಎಷ್ಟು,

ಆ) ಈ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು,

ಇ) ಈ ಶಾಲೆಗಳನ್ನು ಮುಚ್ಚಲು ಸರ್ಕಾರ ಆದೇಶಿಸಿದೆಯೇ,

ಈ) ಈ ರೀತಿ ಮುಚ್ಚುವುದರಿಂದ ಈ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಮಕ್ಕಳಿಗೆ ಬೇರೆ ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ಪ್ರವೇಶ ದೊರಕಿಸಿಕೊಡಲು ಸರ್ಕಾರ ಕೈಗೊಂಡ ಕ್ರಮಗಳೇನು,

ಉ) ಈಗ ನಡೆಯುತ್ತಿರುವ ಇಂತಹ ಶಾಲೆಗಳನ್ನು ಮುಂದುವರೆಸಲು ಸರ್ಕಾರ ನಿರ್ಧರಿಸಿದೆಯೇ?

**ಶ್ರೀ ಬಸವರಾಜ್ ಎಸ್ ಹೊರಟ್ಟಿ ( ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)**

ಅ) ರಾಜ್ಯದಲ್ಲಿ ಕನ್ನಡಕ್ಕೆಂದು ಅನುಮತಿ ಪಡೆದು ನಡೆಸುತ್ತಿರುವ ಆಂಗ್ಲ ಮಾಧ್ಯಮ ಶಾಲೆಗಳು – 2698, ಬೆಂಗಳೂರಿನಲ್ಲಿ – 1513 ಶಾಲೆಗಳು

ಆ) ರಾಜ್ಯದಲ್ಲಿ 300526 ವಿದ್ಯಾರ್ಥಿಗಳು, ಬೆಂಗಳೂರಿನಲ್ಲಿ 1,67,565 ವಿದ್ಯಾರ್ಥಿಗಳು

ಇ) ರಾಜ್ಯದಲ್ಲಿ ಸಕ್ಷಮ ಪ್ರಾಧಿಕಾರಿಗಳು 2215 ಶಾಲೆಗಳ ಮಾನ್ಯತೆಯನ್ನು ಹಿಂಪಡೆದು ಆದೇಶ ಹೊರಡಿಸಿರುತ್ತಾರೆ

ಈ) ಸದರಿ ಶಾಲೆಗಳ ಮಾನ್ಯತೆಯನ್ನು ಸಕ್ಷಮ ಪ್ರಾಧಿಕಾರಗಳು ಶೈಕ್ಷಣಿಕ ವರ್ಷಗಳ ಮಧ್ಯದಲ್ಲಿ ಹಿಂಪಡೆದು ಆದೇಶಗಳನ್ನು ಹೊರಡಿಸಿದ್ದು, ಆ ಹಂತದಲ್ಲಿ ವಿದ್ಯಾರ್ಥಿಗಳನ್ನು ಇತರೆ ಯಾವುದೇ ಶಾಲೆಗೆ ಸೇರಿಸಿದಲ್ಲಿ ಅವರ ಮೇಲೆ ಪ್ರತಿಕೂಲ